Regd No. BG 155

1-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಆದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ 4

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಳ್ಳಿ ಹತೋಟಿಯ ಸುಗ್ರೀವಾಜ್ಞೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ಸೆರೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಹೃದಯಚ್ಛೇದಕ ಗಂತ

ಕೊಚ್ಚಿ— ತೊಡಪುಜಾ ಹತ್ತಿರದ ಎಲಂಡಸಾಮಿನಲ್ಲಿ ಒಂದು ಬೆಟ್ಟದಿಂದ ಉರುಳಿ ಬಂದ ಭಾರಿ ಬಂಡೆಯೊಂದು ಕೆಳಗಿದ್ದ ಒಂದು ಮನೆಯ ಮೇಲೆ ಉರುಳಿ, ಮನೆಯ 7 ಮಂದಿ ಸತ್ತರು.

ಉರಿಯುವ ಪಂಜು ಹಿಡಿದು ಮೆರವಣಿಗೆ

ಲಾಹೋರು— ಬಂಧನದಲ್ಲಿರುವ ತನಾಯಕ ಭುಟ್ಟೋ ಬಿಡುಗಡೆಗೆ ಒತ್ತಾಯ ಪಡಿಸಲು ಒಂದೂವರೆ ಗಂಟೆ ಕಾಲ ಪಾಕಿಸ್ತಾನಿ ಜನತಾ ಪಕ್ಷದವರು ಗುರುವಾರ ರಾತ್ರಿ ಉರಿಯುತ್ತಿದ್ದ ಪಂಜು ಹಿಡಿದು ಮೆರವಣಿಗೆ ನಡೆಸಿದರು.

★

ಫೈನಾನ್ಸು ಕಮಿಷನ್ನಿಗೆ ತಿಳಿಸಲಾಯ್ತು

ಬೆಂಗಳೂರು— ರಾಜ್ಯದಲ್ಲಿ ಆಕ್ಟ್ರಾಯಿ ವಜಾ ಮಾಡುವ ಯೋಜನೆ ಮತ್ತು ತುಕೋಲ್ ಕಮಿಷನ್ ಶಿಫಾರಸ್ಸನ್ನು ಜಾರಿಗೆ ತರುವುದರಿಂದ ರಾಜ್ಯದ ಆರ್ಥಿಕತೆ ಮೇಲೆ ಆಗುವ ಪರಿಣಾಮವನ್ನು ತ್ಯಾಗಿಯವರ ಅಧ್ಯಕ್ಷತೆಯಲ್ಲಿನ ಐದನೇ ಫೈನಾನ್ಸು ಕಮಿಷನ್ನಿಗೆ ತಿಳಿಸಲಾಯಿತು – ಆಕ್ಟ್ರಾಯಿ ವಜಾದಿಂದ ಮುನಿಸಿಪಾಲಿಟಿಗಳಿಗೆ ಒಟ್ಟು ರೂ. 5 ಕೋಟಿ ನಷ್ಟವಾಗುವುದು.

ದನದ ಪ್ರತಿಭಟನಾ ಪ್ರದರ್ಶನ

ನ್ಯೂಯಾರ್ಕು— ವಿದ್ಯುಚ್ಛಕ್ತಿ ಹಾಲು ಕರೆಯುವ ಯಂತ್ರವನ್ನು ಪ್ರಯೋಗಿಸುವುದನ್ನು ಪ್ರತಿಭಟಿಸಿ, ಎರಡು ಹಸುಗಳ ಮತ್ತು ಒಂದು ಗೂಳಿಯ ಪ್ರತಿಭಟನಾ ಪ್ರದರ್ಶನ ಏರ್ಪಡಿಸಲಾಗಿತ್ತು.

○

ಹೊಸ ಸಮಸ್ಯೆ

ವಾಷಿಂಗ್ಟನ್— ವಿಶ್ವಸಂಸ್ಥೆಯ ಕಛೇರಿಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಭಾರತೀಯರಿರುವರೆಂ ಅಮೇರಿಕಾ ಬಹಿರಂಗವಾಗಿ ಪ್ರತಿಭಟಿದೆ.

★

ಬೆಳ್ಳೀ ಬೆಲೆ ಇಳಿತ

ಬೊಂಬಾಯಿ— ಡೆಲ್ಲಿಯಲ್ಲಿ ನಿನ್ನೆ ಹೊರಟ ಬೆಳ್ಳಿ ಹತೋಟಿ ಸುಗ್ರೀವಾಜ್ಞೆಯಿಂದ ಬೆಳ್ಳೀ ಬೆಲೆಯಲ್ಲಿ ಗಮನಾರ್ಹ ಇಳಿತಾಯವಾಗಿದೆ.

ಬೆಳ್ಳಿ ಮತ್ತಿತರ ಕೆಲ ಪದಾರ್ಥಗಳ ಮೇಲೆ ಹತೋಟಿ

ನವದೆಹಲಿ— ದೇಶಕ್ಕೆ ಅಕ್ರಮವಾಗಿ ತರುವ ಮತ್ತು ದೇಶದಿಂದ ಅಕ್ರಮವಾಗಿ ಸಾಗಿಸುವ ಪದಾರ್ಥಗಳ ಪತ್ತೆ ಮತ್ತು ಮುಟ್ಟುಕೋಲು ಹಾಕಲು ಕಸ್ಟಂಸ್ ಶಾಸನದಲ್ಲಿ ತಿದ್ದುಪಡಿಯ ಸುಗ್ರೀವಾಜ್ಞೆ ನಿನ್ನೆ ಹೊರಡಿಸಲಾಯಿತು – ಬೆಳ್ಳಿಯು ಹೊರಕ್ಕೆ ಸಾಗಾಣಿಕೆಯಾವುದನ್ನು ತಡೆಗಟ್ಟಲು ಇದು ಮುಖ್ಯ – ರೂ. 15000 ಮೌಲ್ಯಕ್ಕೆ ಹೆಚ್ಚು ಬೆಳ್ಳಿ ಮತ್ತು ನಾಣ್ಯಹೊಂದಿರುವವರು ಅಧಿಕಾರಿಗಳಿಗೆ ತಿಳಿಸಬೇಕು ಮತ್ತು ಅದನ್ನಿಟ್ಟಿರುವ ಸ್ಥಳ ತಿಳಿಸಬೇಕು: ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಾಣಿಕೆ ಮತ್ತು ಮಾರಾಟದ ಮೇಲೂ ನಿಬಂಧನೆ ಹಾಕಲಾಗಿದೆ – ಮತ್ತು ವಿದೇಶಿ ಮೂಲದ ಗಡಿಯಾರ ಸೇರಿ ಹನ್ನೊಂದು ಪದಾರ್ಥಗಳ ಮೇಲೆ ನಿಬಂಧನೆಗಳು ಹಾಕಲಾಗಿದೆ.

●

4 ಗಂಟೆಗಳ ರೈಲು ಓಡಾಡಕ್ಕೆ ಅಡ್ಡಿ

ತಿರುಚಿ— ಏ ಐ ಆರ್ ನಲ್ಲಿ ಹಿಂದಿ ವಾರ್ತೆಗೆ ಪ್ರಾಮುಖ್ಯತೆ ಕೊಟ್ಟಿರುವದನ್ನು ಪ್ರತಿಭಟಿಸಿ ನೂರಾರು ಕಾಲೇಜು ಮತ್ತು ಸ್ಕೂಲು ವಿದ್ಯಾರ್ಥಿಗಳು ಅರಿಯಲೂರು ಸ್ಟೇಷನ್ ಹತ್ತಿರ ರೈಲು ರಸ್ತೆಯಲ್ಲಿ ಬೈಠಕ್ ಮಾಡಿ ನಿನ್ನೆ ನಾಲ್ಕು ಗಂಟೆಗಳ ಕಾಲ ರೈಲು ಓಡಾಟಕ್ಕೆ ಆತಂಕಪಡಿಸಿದರು.

★

ಕಳ್ಳ ಸಾಗಾಣಿಕೆ ಸಾರಾಯಿ

ರಾಯಚೂರು— 18 ಟ್ರಾಕ್ಟರು ಟೈರು ಮತ್ತು ಟ್ಯೂಬುಗಳಲ್ಲಿ ಮುಚ್ಚಿ ಕಾರಿನಲ್ಲಿ ತರಲಾಗುತ್ತಿದ್ದ ರೂ 15000 ಬೆಲೆಯ ಸಾರಾಯನ್ನು ವಶಪಡಿಸಿಕೊಂಡು, 3 ಮಂದಿಯನ್ನು ದಸ್ತಗಿರಿಮಾಡಲಾಯಿತು.

★

ಇದೀಗ

ಮೈಸೂರು ಸರ್ಕಾರದ ರೇಷ್ಮೆ ನೇಯ್ಗೆ ಕಾರ್ಖಾನೆಯಿಂದ

ಕಣ್ಣು ತಣಿಸುವ ಅಪ್ರತಿಮ ಬಣ್ಣಗಳು

ಮನಮೋಹಕ ನಮೂನೆಯ

ವಿಶಿಷ್ಟ ನಯಗಾರಿಕೆಯ

ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ

★

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ,
ಮಾನಂದವಾಡಿ ರಸ್ತೆ, ಮೈಸೂರು-4

ಡಾ॥ ಮೋದಿಯವರ ಕಾರ್ಯಕ್ರಮ

ಬೆಂಗಳೂರು ಅರಮನೆ ರಸ್ತೆಯಲ್ಲಿನ ವೆಂಕಟರಮಣಸ್ವ ಛತ್ರದಲ್ಲಿ ತಾ॥ 7 ರಂದು ಬೆಳಿಗ್ಗೆ 9 ಗಂಟೆಗೆ ಪದ್ಮಭೂಷಣ ನೇತ್ರದಾನಿ ಡಾ ॥ ಎಂ ಸಿ ಮೋದಿಯವರ ಉಚಿತ ನೇತ್ರ ಆಪರೇಷ ಕ್ಯಾಂಪನ್ನು ಉಪ ರಾಷ್ಟ್ರಾಧ್ಯಕ್ಷ ಡಾ ॥ ವಿ ವಿ ಗಿರಿಯವರು ಉದ್ಘಾಟಿಸುವರು.

ಆಗಬೇಕಾದ್ದೇ ಸರಿ

ಬೆಂಗಳೂರು— ಇಲ್ಲಿ ನಡೆದ ಅಖಿಲ ಭಾರತ ದನ ಸಾಕುವವರ ಸಮ್ಮೇಳನದಲ್ಲಿ— ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದನಗಳಿಗೆ ಆಹಾರ ಮತ್ತು ಹುಲ್ಲು ಒದಗಿಸುವ ಏರ್ಪಾಡುಗಳನ್ನಾಡಬೇಕೆಂದು ಒತ್ತಾಯಿಸಲಾಯಿತು.

ಪರೀಕ್ಷೆ ಉತ್ತರ ಪತ್ರಿಕೆಗಳೇ ಜೆಟ್

ಹೈದರಾಬಾದು— 1968 ನೇ ಅಕ್ಟೋಬರಿನಲ್ಲಿ ನಡೆದ ಆಂಧ್ರ ಹೆಚ್ ಎಸ್ ಮತ್ತು ಎಂ ಪಿ ಪರೀಕ್ಷೆಗಳ ಕಾಕಿನಾಡಾ ಮತ್ತು ರಾಜಮಹೇಂದ್ರಿ ಕೇಂದ್ರಗಳ ಉತ್ತರ ಪತ್ರಿಕೆಗಳೇ ಹಾಳಾಗಿವೆಯಂತೆ ! ಅಧಿಕಾರಿಗಳು ಕಾಕಿನಾಡದಲ್ಲಿ ಈ ತಿಂಗಳು ತಾ॥ 24 ರಂದು ಪುನಃ ಪರೀಕ್ಷೆ ನಡೆಸಲಿರುವರು.

ಪಾಕಿಸ್ಥಾನದಲ್ಲಿ ಹಿಂದೂಗಳ ಸಂಖ್ಯೆ

1953 ನೇ ಜನವರಿಯಿಂದ 1968 ನೇ ಆಗಸ್ಟ್ ವರೆಗೆ 1707076 ಮುಸ್ಲಿಮೇತರರು ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದರು ಎಂಬ ವಿಷಯವನ್ನು ಲೋಕಸಭೆಯಲ್ಲಿ ತಿಳಿಸಲಾಯಿತು — ಪಾಕಿಸ್ಥಾನದಲ್ಲಿ ಮುಸ್ಲಿಮೇತರರ ಜನಸಂಖ್ಯೆ 1951 ರಲ್ಲಿ ಶೇಕಡ 14.1 ಇದ್ದದ್ದು 1961 ರಲ್ಲಿ ಶೇಕಡ 11.9 ಆಯಿತೆಂದೂ ಈ ಕಾಲದಲ್ಲಿ ಭಾರತದಲ್ಲಿ ಮುಸ್ಲಿಂ ಜನಸಂಖ್ಯೆ ಶೇಕಡ 9.93 ರಿಂದ 10.7 ಕ್ಕೆ ಹೆಚ್ಚಿತೆಂದೂ ತಿಳಿಸಲಾಯಿತು.



Help The Gorakshana

Quality Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

ವುಡ್‌ಲಾಂಡ್ಸ್ ಜಯಪ್ರದ 3 ನೇ ವಾರ

ಅದ್ಭುತ, ಅಸಮಾನ, ಅಸಾಧಾರಣ ಹಿಲ್ಲಂಗೀಳಿನ ವ್ಯಕ್ತಿಗಳ ವೈಭವಪೂರಿತ ಆಗಮನ

— ಜೆಮಿನಿಯವರ ಹಾಸ್ಯಮಯ ವರ್ಣರಂಜಿತ ಚಿತ್ರ (ಹಿಂದಿ) —

ತೀನ್ ಬಹುರಾಣಿಯಾ

ತಾರಾಗಣ — ಸಾಹುಕಾರ್ ಜಾನಕಿ, ಕಾಂಚನ, ಜಯಂತಿ, ಶಶಿಕಲಾ, ಆಘಾ, ರಮೇಶ್‌ದೇವ್, ರಾಜೇಂದ್ರನಾಥ್, ಪೃಥ್ವಿರಾಜ್ ಕಪೂರ್

[ದಿನ 3 ಪ್ರದರ್ಶನಗಳು]

ಆಪೇರಾ ಜನಪ್ರಿಯ 5 ನೇವಾರ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ಪಾಲಾದ್

ಪಾತ್ರ — ಜಿತೇಂದ್ರ, ಬಬಿತಾ, ಸುಜೀತ್ ಕುಮಾರ್, ಮೆಹಮ್ಮೂದ್

ನಿರ್ದೇಶನ — ಕುಂದನ್ ಕುಮಾರ್ ಸಂಗೀತ—ಚಿತ್ರಗುಪ್ತ

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press, Chamarajapuram, Mysoe 4